# ಶ್ರಾವಣ ದರ್ಶನ : 20ನೇ ದಿನದ ಕಾರ್ಯಕ್ರಮ

**ಚಿತ್ರದುರ್ಗ ಆ. 9** : ಮಾನವ ಬದುಕಿನಲ್ಲಿ ಒಮ್ಮೊಮ್ಮೆ ಅಹಂಕಾರ ಆವರಿಸಿಕೊಳ್ಳುತ್ತದೆ. ದೆವ್ವ ಪೀಡೆ ಪಿಶಾಚಿಗಳನ್ನು ಮಂತ್ರಗಳಿಂದ ಬಿಡಿಸಬಹುದು. ಆದರೆ ಅಹಂಕಾರವನ್ನು ಬಿಡಿಸುವುದು ಕಷ್ಟ. ಕಾರಣ ಅಹಂಕಾರ ಎಂಬುದು ವಿಷಸರ್ಪ ಇದ್ದಹಾಗೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಮುರುಘಾಮಠದಿಂದ ಭಾನುವಾರ ನಡೆದ ಶ್ರಾವಣದರ್ಶನ 20ನೇ ದಿನದ ಫೇಸ್‌ಬುಕ್ ಮತ್ತು ಯುಟ್ಯೂಬ್ ಲೈವ್ ಕಾರ್ಯಕ್ರಮದಲ್ಲಿ ಅಹಂಕಾರ ನಿರಸನ ಮತ್ತು ಉದಾತ್ತ ಚಿಂತನ ವಿಷಯ ಕುರಿತು ಮಾತನಾಡಿದ ಶ್ರೀಗಳು, ಮಾನವ ಬದುಕಿನಲ್ಲಿ ಒಮ್ಮೊಮ್ಮೆ ಅಹಂಕಾರ ಆವರಿಸಿಕೊಳ್ಳುತ್ತದೆ. ದೆವ್ವ ಪೀಡೆ ಪಿಶಾಚಿಗಳನ್ನು ಮಂತ್ರಗಳಿಂದ ಬಿಡಿಸಬಹುದು. ಆದರೆ ಅಹಂಕಾರವನ್ನು ಬಿಡಿಸುವುದು ಕಷ್ಟ. ಕಾರಣ ಅಹಂಕಾರ ಎಂಬುದು ವಿಷಸರ್ಪ ಇದ್ದಹಾಗೆ. ವ್ಯಕ್ತಿ ತಿಳಿದೋ ತಿಳಿಯದೋ ಅಹಂಕಾರಕ್ಕೆ ಒಳಗಾಗುತ್ತಾನೆ. ಒಂದುವೇಳೆ ವಿಷಸರ್ಪ ಕಚ್ಚಿದವರನ್ನು ವೈದ್ಯರ ಚಿಕಿತ್ಸೆಯಿಂದ ಬದುಕಿಸಬಹುದು ಎಂದು ತಿಳಿಸಿದರು.

ಅಹಂಕಾರದ ಮೂಲಕ ಅಜ್ಞಾನ : ಇದರ ಮುಂದಿನ ಹಂತವೇ ಮೂರ್ಖತನ. ಅಜ್ಞಾನದಿಂದ ದೊಡ್ಡತನ ಬರುವುದಿಲ್ಲ. ಇದರಿಂದ ದಡ್ಡತನ ಬರುತ್ತದೆ. ಅಜ್ಞಾನ + ಮೂರ್ಖತನ = ದುಷ್ಟತನ. ಈ ದುಷ್ಟತನವನ್ನು ಅಧ್ಯಯನ, ಪರಮಾರ್ಥಯಾನ ಮತ್ತು ಸತ್ಸಂಗದಿಂದ ದೂರಮಾಡಬಹುದು. ಮದ ಜೀವನದ ಹದವನ್ನು ಹಾಳು ಮಾಡುತ್ತದೆ. ಸ್ವಾರಸ್ಯವನ್ನು ಹಾಳು ಮಾಡುತ್ತದೆ. ಮದ ಬರುತ್ತದೆ ಹದ ಹೋಗುತ್ತದೆ ಬದುಕಿನ ಕದ ಮುಚ್ಚುತ್ತದೆ. ಯಾವುದೇ ರೀತಿಯ ವಿದ್ಯೆ ಪ್ರತಿಭೆಯನ್ನು ಪಡೆದವರು ಅಹಂಕಾರಕ್ಕೆ ಒಳಗಾಗಬಾರದು. ಇದರಿಂದ ದೂರವಾಗಿ ಅಹಂನಿರಸನ ಸ್ಥಿತಿ ಕಾಣಬೇಕು. ಅಷ್ಟಮದಗಳಿಂದ ಘರ್ಜಿಸಿದವರಿಗೆ ಭವಿಷ್ಯವಿಲ್ಲ. ಬಾಗಿದವನಿಗೆ ಭವಿಷ್ಯವಿದೆ; ಬೀಗಿದವರಿಗೆ ಭವಿಷ್ಯವಿಲ್ಲ. ಅದಕ್ಕಾಗಿ ಬಸವಣ್ಣನವರು ಬಾಳೆಯ ಕಂಬದಂತೆ ಭಕ್ತನು ಬಾಗಿರಬೇಕು ಎಂದಿದ್ದಾರೆ. ಅಹಂಕಾರದಿಂದ ಅಂತಃಸತ್ವದ ಹರಣ ಆಗುತ್ತದೆ. ಯಾರು ಅಹಂಕಾರಕ್ಕೆ ಒಳಗಾಗುತ್ತಾರೋ ಅವರ ಅಂತಃಸತ್ವ ಬೂದಿಯಾಗುತ್ತದೆ. ಇದರ ಮುಂದೆ ಅಂತಜ್ರ್ಞಾನವು ಹಾಳಾಗುತ್ತದೆ. ಇದು ಬಹುದೊಡ್ಡ ಆಪತ್ತು.

ವ್ಯಕ್ತಿತ್ವದ ಅವಸಾನ : ಪ್ರತಿಯೊಬ್ಬ ವ್ಯಕ್ತಿಯು ತನ್ನದೇ ಆದ ವ್ಯಕ್ತಿತ್ವವನ್ನು ಹೊಂದಿರುತ್ತಾನೆ. ಆದರೆ ಅಹಂಕಾರ ಅದನ್ನು ನಾಶ ಮಾಡುತ್ತದೆ. ಒಂದುವೇಳೆ ಬಹಿರಂಗದ ವೈರಿಗಳೊಂದಿಗೆ ಹೋರಾಡಿ ಗೆಲ್ಲಬಹುದು ಆದರೆ ಅಂತರಂಗದೊಳಗೆ ಸದಾ ವಿಷ ಚಿಮ್ಮಿಸುವ ಅಹಂಕಾರ ಅಜ್ಞಾನ ಬಹುದೊಡ್ಡ ವೈರಿಗಳಾಗಿವೆ. ಹಾಗಾಗಿ ಅಹಂಕಾರದ ಜಾಗದಲ್ಲಿ ನಿರಂಹಕಾರ ಮತ್ತು ಅಹಂಭಾವದಲ್ಲಿ ನಿರಹಂಭಾವ ಬರಬೇಕು. ಅಹಂಕಾರ ಎನ್ನುವುದು ಬದುಕಿನ ಬಂಧನ. ಅನೇಕರು ಬದುಕನ್ನು ಬಂಧನವಾಗಿಸಿಕೊಂಡಿದ್ದಾರೆ. ಯಾರು ಬೌದ್ಧಿಕಯಾನಕ್ಕೆ ಒಳಗಾಗುತ್ತಾರೋ ಅವರು ಹಂತಹಂತವಾಗಿ ಈ ಬಂಧನದಿಂದ ಮುಕ್ತರಾಗುತ್ತಾರೆ ಬಿಡುಗಡೆ ಹೊಂದುತ್ತಾರೆ. ಸಾಮಾನ್ಯವಾಗಿ ಧನ ಸಂಚಾರವಾದಂತೆ ಅಹಂಕಾರವು ಏರಿಬರುತ್ತದೆ. ಇದಕ್ಕೆ ಒಂದು ಸರಳ ಉಪಾಯ ದಾಸೋಹಂಭಾವ ಅಳವಡಬೇಕು. ಇದರಲ್ಲಿ ಸಮರ್ಪಣಾಭಾವವಿದೆ. ವ್ಯಕ್ತಿ ಅಹಂಕಾರದಿಂದ ಬಿಡುಗಡೆ ಆಗಲು ದಾಸೋಹ ಭಾವ ಅವಶ್ಯವಾಗಿದೆ. ಸೋಹಂ ಎಂಬುದು ಅಂತರಂಗದ ಮದ, ಶಿವೋಹಂ ಎಂಬುದು ಬಹಿರಂಗದ ಮದ. ಇವೆರಡನ್ನು ಬಿಡಿಸಿ ದಾಸೋಹಂಭಾವ ಸಿದ್ಧಿಸಯ್ಯ ಎಂದು ಶರಣರು ಸಾರಿದ್ದಾರೆ ಎಂದರು.